3. ದರಖಾಸ್ತು ಮಾಡಲ್ಪಟ್ಟ ದರವು ಯಾವ ತಾಲ್ಲೂಕಿಗಾ ದರಖಾಸ್ತು ಅಂಗೀಕರಿಸಲ್ಪಡುತ್ತೊ ಅಂಥಾ ತಾಲ್ಲೂಕಿಗೆಲ್ಲಾ ಸರಾಸರಿ ವಂದೇಯಾಗಿರತಕ್ಕದ್ದು.

4. ದರಖಾಸ್ತುಗಳು ಮೈಸೂರು ಫಾರೆಸ್ಟ್ಸ್ ಸೂಪರ್‌ಟೆಂಡೆಂಟರವರ ಆಫೀಸಿಗೆ 30ನೇ ಏಪ್ರಿಲ್ ಮತ್ತು ಮಿನಲ್ಲಾಗಲೀ ತಪ್ಪೂ ವ್ಯವಾಗಲೀ ತಲಪಬೇಕಾಗಿರುತ್ತೆ.

5. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು, ತನ್ನ ಕಂಟ್ರಾಕ್ಟು ಪ್ರಕಾರ ಕ್ರಮವಾಗಿ ನಡೆದುಕೊಳ್ಳುವ ಬಗ್ಗೆ ಪ್ರತಿ ಬಂದು ತಾಲ್ಲೂಕಿಗೋಸ್ಕರ ಇದರಲ್ಲೀ ಕಂಡಪ್ರಕಾರ ಜಾಮೀನಿ ಮೊಬಲಗು ಠ ಜಡ್ಮಾಡುವದಕ್ಕೆ ಬಳಪಟ್ಟಿರತಕ್ಕದ್ದು.

		ರೂಪಾಯಿ
ಹುಣಸೂರು ತಾಲ್ಲೂಕಿನಲ್ಲಿ	.. ..	250
ಹೆಗ್ಗಡದೇವನಕೋಟೆ ಡಿಟೋ	.. ..	250
ನಂಜನಗೂಡು ಡಿಟೋ	.. ..	120
ಗುಂಡ್ಲುಪೇಟೆ ಡಿಟೋ	.. ..	120
ಚಾಮರಾಜನಗರ ಡಿಟೋ	.. —	120

6. ಸಂದಲ್ ಮಷೇಗಾರನಿಂದಾಗಲೀ ಫಾರೆಸ್ಟರಿನಿಂದಾಗಲೀ ಯಾವದಾದರೂ ಗಂಧದ ಮರಗಳು ಸಾಗಿಸುವ ಬಗ್ಗೆ ಸಿದ್ಧವಾಗಿರುವದಾಗಿ ವರ್ತಮಾನ ತಿಳಿಸಲ್ಪಟ್ಟ ಮೇಲೆ, ಕಂಟ್ರಾಕ್ಟುದಾರನು ಅವುಗಳನ್ನು ಸಂದಲ್ ಕೋಠೀಗಳಿಗೆ 20 ದಿವಸಗಳವಳಗಾಗಿ ಸಾಗಿಸುವ ಬಗ್ಗೆ ಬದ್ಧನಾಗಿರತಕ್ಕದ್ದು.

ಕಂಟ್ರಾಕ್ಟುದಾರನು ವಾಯಿದೆವಳಗಾಗಿ ಅವುಗಳನ್ನು ಸಾಗಿಸುವದಕ್ಕೆ ಸ್ಪಿದರೆ, ಅವನು ದರ ಭಂಡೀಜೋಜೆ 1ಕ್ಕೆ 2 ಆಣೆ ಪ್ರಕಾರ ಕಟ್ಟಿಕೊಡತಕ್ಕದ್ದು, ಅಂದರೆ ಮರಗಳು ಕೋಠೀಗೆ ಬಂದು ತಲಪುವ ಬಗ್ಗೆ ಸಾವಕಾಶವಾದ ದಿನ 1ಕ್ಕೆ ಟರ್ 1ಕ್ಕೆ 4 ಆಣೆ ಪ್ರಕಾರ ತೆರತಕ್ಕದ್ದು.

ಸಿ. ಇ. ಯಂ, ರಸ್ಸೆಲ್,
ಫಾರೆಸ್ಟ್ ವ ಗವರ್ಮೆಂಟ್ ಫಾರಂಗಳ ಸೂಪರ್‌ಟೆಂಡೆಂಟ್.

ಪರೀಕ್ಷೆ.

ತಾರೀಖು 4ನೇ ಏಪ್ರಿಲ್ 1887.

1887ನೇ ಇಸವಿ ಜೂನ್ ಮಾಹೆಯಲ್ಲಿ ನಡಿಯುವ ಮೈಸೂರ್ ಲೋಕಲ್ ಸರ್ವಿಸ್ ವ ಪ್ಲೀಡರ್‌ಗಳ ಪರೀಕ್ಷೆ ವಿಷಯದಲ್ಲಿ—

ಇದರಿಂದ ಪ್ರಕಟಪಡಿಸುವದೇನಂದರೆ, ಅಸಿಸ್ಟೆಂಟ್ ಕಮ್ಮಿಷನರು, ಮುನ್ಸಿಫರು ಅಮಲ್ದಾರರು, ಡೆಪ್ಯುಟಿ ಅಮಲ್ದಾರರು ವ ಪ್ಲೀಡರುಗಳ ಉದ್ಯೋಗಕ್ಕಾಗಿ ವಿಧಿಸಲ್ಪಟ್ಟ ಪರೀಕ್ಷೆಗಳು, 1887ನೇ ಇಸವಿ ಜೂನ್ 13ನೇ ಮಂಗಳವಾರ ಮತ್ತು ಆ ಮಾರನೇ ದಿವಸಗಳಲ್ಲಿ ಪ್ರತಿ ದಿವಸವೂ ಬೆಳಿಗ್ಗೆ 10½ ಘಂಟೆ ಲಾಗಾಯಿತು ಬೆಂಗಳೂರು ಮೊಕ್ತಾಂ ಪಬ್ಲಿಕ್ ಆಫೀಸಿನಲ್ಲಿಯ ಸೆಂಟ್ರಲ್ ಹಾಲ್‌ನಲ್ಲಿ ನಡಿಸಲ್ಪಡುವದು.

ಪರೀಕ್ಷೆಗಳು ಅಕ್ಷರಗಳಿಂದ ಗುರ್ತು ಮಾಡಲ್ಪಟ್ಟಿವೆ.

ಪ್ರತಿ ಪಾಠದ ಸವಾಲ್ ಪಟ್ಟಿಯು ಕೊಡುವ ತಾರೀಖು ವ ಘಂಟೆ ತೋರಿಸುವ ತಖ್ತೆಯು ಇದರಲ್ಲೀ ಕಾಣಿಸಿರುತ್ತೆ. ಆಯಾ ಪರೀಕ್ಷೆಗೆ ಬರತಕ್ಕ ದರಖಾಸ್ತುದಾರರು ಆಯಾ ತಾರೀಖುಗಳಲ್ಲಿ ಹಾಜರಿರಬೇಕು.

ಅಸಿಸ್ಟೆಂಟ್ ಕಮ್ಮಿಷನರುಗಳ ಮೊಕರರಾತೀ ಬಗ್ಗೆ ಪರೀಕ್ಷೆ	..	A.
ಮುನ್ಸಿಫರ ಡಿಟೋ ಡಿಟೋ	.. ..	B.
ಅಮಲ್ದಾರ್ ವ ಡೆಪ್ಯುಟಿ ಅಮಲ್ದಾರರ ಡಿಟೋ ಡಿಟೋ	..	C.
ಪ್ಲೀಡರುಗಳ .. ಡಿಟೋ ಡಿಟೋ	..	D.

ತಾರೀಖು.	ಘಂಟೆ.	ಪಾಠ.	ಪರಿಕ್ಷೆ.
ಸೋಮವಾರ, 13ನೇ ಜೂನ್ 1887.	10 ರಿಂದ 12	ಲ್ಯಾಂಡ್ ಅಕ್ವಿಜಿಷನ್ ಆಕ್ಟ್	A. C.
	12 „ 1½	ರಿಜಿಸ್ಟ್ರೇಷನ್ ಆಕ್ಟ್	A. C. D.
	2 „ 4	ಕ್ಯಾಟಲ್ ಟ್ರೆಸ್ಪಾಸ್ ಆಕ್ಟ್, ಎಕ್ಸೈಸ್ ಆಕ್ಟ್, ಓಪಿಯಂ ಆಕ್ಟ್	A. C.
	4 „ 5½	ಸ್ಟ್ಯಾಂಪ್ ಮತ್ತು ಕೋರ್ಟ್ ಫೀಸ್ ಆಕ್ಟ್	A. C. D.
ಮಂಗಳವಾರ, 14ನೇ ಜೂನ್ 1887.	10½ „ 11½	ಫಾರೆಸ್ಟ್ ರೂಲ್ಸ್	A. C.
	11½ „ 2	ರೆವಿನ್ಯೂ ಮ್ಯಾನ್ಯುಯಲ್	A. C. D.
		ಸರ್ವೆ ಮ್ಯಾನ್ಯುಯಲ್	A. C.
	2½ „ 4½	ಸಿವಿಲ್ ಅಕ್ಕವುಂಟ್ ಮತ್ತು ಫಿನಾನ್ಷಿಯಲ್ ಕೋಡುಗಳು	A. C.
ಬುಧವಾರ, 15ನೇ ಜೂನ್ 1887.	10½ „ 2	ಇಂಡಿಯನ್ ಪಿನಲ್‌ಕೋಡ್	A. B. C. D.
	2½ „ 5½	ಕ್ರಿಮಿನಲ್ ಪ್ರೊಸಿಜ್ಯೂರ್ ಕೋಡ್	A. B. C. D.
ಗುರುವಾರ, 16ನೇ ಜೂನ್ 1887.	10½ „ 1	ಟಾರ್ಟ್ಸ್	A. B. D.
	1½ „ 4	ಎವಿಡೆನ್ಸ್ ಆಕ್ಟ್	A. B. C. D.
	4 „ 5	ಪೊಲೀಸ್ ರೂಲ್ಸ್	A. C.
ಶುಕ್ರವಾರ, 17ನೇ ಜೂನ್ 1887.	10½ „ 1½	ಹಿಂದೂ ಲಾ	A. B. D.
	2 „ 5	ಮಹಮ್ಮದೀಯ ಲಾ	A. B. D.
ಶನಿವಾರ, 18ನೇ ಜೂನ್ 1887.	10½ „ 1½	ಸ್ಪೆಸಿಫಿಕ್ ರಿಲೀಫ್ ಆಕ್ಟ್	A. B. D.
	2 „ 5	ಸಿವಿಲ್ ಪ್ರೊಸಿಜ್ಯೂರ್ ಕೋಡ್	A. B. D.
ಸೋಮವಾರ, 20ನೇ ಜೂನ್ 1887.	10½ „ 12½	ಮಾರ್ಟ್‌ಗೇಜ್, ಕಾನ್ಟ್ರಾಕ್ಟ್	A. B. D.
	1 „ 3	ಲಿಮಿಟೇಷನ್ ಆಕ್ಟ್	A. B. D.
	3 „ 5	ಕಂಟ್ರಾಕ್ಟ್, ಕಾನೂನ್	A. B. D.
ಮಂಗಳವಾರ, 21ನೇ ಜೂನ್ 1887.	10½ „ 12½	ವ್ಯವಹರಣೆ	D.

ಎಲ್. ಅನಂತಸ್ವಾಮಿ ರಾವ್,
ಸೆಕ್ರಿಟೇರಿ.